ನಾನು ನೋಡಿಯೇ ತಿಂಗಳುಗಳು ಉರುಳಿದವು. ಆಕೆಗೆ ಸಕಲ ಸೌಲಭ್ಯಗಳನ್ನೂ ಒಳಗಡೆಯೇ ಒದಗಿಸಲಾಗಿದೆ. ಅನಿವಾರ್ಯವಾಗಿ ಆಕೆ ಹೊರಗೆ ಹೋಗಬೇಕಾದರೆ ಪ್ರತ್ಯೇಕ ರಹಸ್ಯ ಮಾರ್ಗವಿದೆ. ಅಮೀನನಿಗೆ ಬಿಟ್ಟರೆ ಇಲ್ಲಿ ಯಾರಿಗೂ ಆ ಮಾರ್ಗ ಗೊತ್ತಿಲ್ಲ. ಮತ್ತು ನ್ಯಾಯದೇವತೆ ನ್ಯಾಯಸ್ಥಾನ ಅರ್ಥಾತ್ ಕೋರ್ಟ್ ಹಾಲ್‌ಗೆ ಬರಬೇಕಾದರೆ ತುಂಬಾ ಬಂದೋಬಸ್ತ್ ಇರುತ್ತದೆ. ನ್ಯಾಯಸ್ಥಾನದಲ್ಲಿ ಬಿಟ್ಟರೆ ನ್ಯಾಯದೇವತೆ ಬೇರೆಲ್ಲೂ ಮಾತನಾಡಬಾರದೆಂಬ ಘನ ನಿಯಮ ಕೂಡ ಇದೆ...'ಕಾವಲುಗಾರ ಪುರಾಣವನ್ನೇ ಬಿಚ್ಚಿಟ್ಟಿದ್ದ. ಅವಳು ಒಳಗೆ ಹೋಗುವವರನ್ನು ತೋರಿಸಿ 'ಅವರು ಹೋಗುತ್ತಿದ್ದಾರಲ್ಲ' ಎಂದು ಪ್ರಶ್ನಿಸಿದ್ದಳು.

'ಆಂ, ಒಳ್ಳೆಯ ಮಾತು. ಅವರ ಕೊರಳುಗಳಲ್ಲಿ ಐಡೆಂಟಿಟಿ ಕಾರ್ಡುಗಳಿವೆ ನೋಡು ತಂಗಿ. ನಿನ್ನ ಬಳಿ ಇದೆಯಾ? ಗುರುತಿನ ಚೀಟಿ ಇದ್ದರೂ ಉದ್ದೇಶ ನಿಖರವಾಗಿ ಉಲ್ಲೇಖಿಸಿರಬೇಕು'. ಕಡ್ಡಿ ಮುರಿದಂತೆ ಉದುರಿದ್ದವು ಕಾವಲುಗಾರನ ಮಾತುಗಳು.

'ಅಣ್ಣಾ, ನಾನು ತುರ್ತಾಗಿ ನ್ಯಾಯದೇವತೆಯನ್ನು ನೋಡಬೇಕು. ನೀನು ದಯೆತೋರಿದರೆ ನ್ಯಾಯದೇವತೆಯನ್ನು ಭೇಟಿಯಾಗಿ ಅರ್ಧ ಗಂಟೆಯಲ್ಲಿ ಹಿಂತಿರುಗಿ ಬಂದುಬಿಡುತ್ತೇನೆ' ಎಂದು ಗೋಗರೆದಳು. ಕಾವಲುಗಾರನ ಮನಸ್ಸು ಬೇಗ ಕರಗುವುದಿಲ್ಲ. ಅದು ಕಾವಲುಗಾರನ ಹುಟ್ಟು ಗುಣ.

'ತಂಗಿ, ನನ್ನ ಕೆಲಸಕ್ಕೆ ಕುತ್ತು ತರುವಂತಿರುವೆ ನೀನು. ನ್ಯಾಯದೇವತೆಯನ್ನು ನೋಡುವ ನಿನ್ನ ಘನ ಉದ್ದೇಶವಾದರೂ ಏನು?'. ತಮಾಷೆ ಕಾವಲುಗಾರನಿಗೆ.

'ನನಗಾಗಿರುವ ಅನ್ಯಾಯವನ್ನು ನ್ಯಾಯದೇವತೆಯಲ್ಲಿ ಅರಹಬೇಕು'.

'ಏನಂಥ ಅನ್ಯಾಯ ಆಗಿದ್ದು ನಿನಗೆ'. ಕಾವಲುಗಾರನಿಗೂ ಕುತೂಹಲ!

'ಅದನ್ನು ನ್ಯಾಯದೇವತೆಯ ಮುಂದೆಯೇ ಹೇಳಬೇಕು. ನೀನು ಕಾವಲುಗಾರ, ಪರಿಹಾರವನ್ನು ಕೊಡಬಲ್ಲೆಯೇನು?' — ಧೈರ್ಯ ತುಂಬಿತ್ತು ಅವಳ ಮಾತುಗಳಲ್ಲಿ.

'ಆಹಾ, ಎಂಥ ಮಾತು, ಎಂಥ ಮಾತು. ನಿನ್ನ ಮಾತು ನಿಜ ತಂಗಿ. ಆದರೆ ಒಳಗೆ ಹೋಗಿ ನ್ಯಾಯದೇವತೆಯನ್ನು ಕಾಣಲು ಕೆಲವು ಕಾರಣಗಳು, ನಿಬಂಧನೆಗಳು ಕಡ್ಡಾಯವಾಗಿವೆ'. ಕಾವಲುಗಾರ ಈಗ ಗಂಭೀರನಾದ.

'ಉದ್ದೇಶಕ್ಕಿಂತಲೂ ನ್ಯಾಯಕ್ಕಿಂತಲೂ ನಿಯಮಗಳೇ ಮುಖ್ಯವೇನು?' ತರ್ಕವಿತ್ತು ಅವಳ ಮಾತುಗಳಲ್ಲಿ. 'ಹೌದು ತಂಗಿ ಹೌದು. ಅನ್ಯಾಯದ ವಿರುದ್ಧ ಮೊದಲು ಫಿರ್ಯಾದು ದಾಖಲಿಸಬೇಕು, ನ್ಯಾಯದೇಗುಲದಲ್ಲಿ ವಾದಿಸಲು ನ್ಯಾಯವಾದಿಯೊಬ್ಬರನ್ನು ನೇಮಿಸಿಕೊಳ್ಳಬೇಕು. ನಡೆದ ಅನ್ಯಾಯ ಸಾಬೀತುಪಡಿಸಲು ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಬೇಕು. ಏನಿದೆ ನಿನ್ನಲ್ಲಿ, ಬರಿಗೈಲಿ ಬಂದಿರುವೆ' ಎಂದು ನಕ್ಕು ಛೇಡಿಸಿದ ಕಾವಲುಗಾರ.

'ಅಣ್ಣಾ, ಸಾಕ್ಷಾತ್ ಸಾಕ್ಷಿಯಾಗಿ ನಾನೇ ಇದ್ದೇನೆ' ಅವಳು ಅಲವತ್ತುಕೊಂಡಳು.

'ಅಲ್ಲಿ ನೋಡು ತಂಗಿ ಆ ಸರತಿಯ ಸಾಲನ್ನು. ಹಣವಿಲ್ಲದವರು, ಶಿಫಾರಸ್ಸು ಇಲ್ಲದವರು, ನ್ಯಾಯವಾದಿಗಳನ್ನು ನೇಮಿಸಿಕೊಳ್ಳಲಾರದವರು, ಸಾಕ್ಷ್ಯಾಧಾರಗಳೇನೂ ಇಲ್ಲದವರು ನ್ಯಾಯದೇವತೆಯನ್ನು ಕಾಣಲು ನಿಂತವರು...'. ಕಾವಲುಗಾರ ತೋರಿದ ಕಡೆಗೆ ಅವಳು ಕಣ್ಣು ಹಾಯಿಸಿದಳು. ಕೊನೆಯೇ ಕಾಣದಂತಿದ್ದ ಸರತಿಯ ಸಾಲು. ಅವಳ ಎದೆ ಧಸಕ್ಕೆಂದಿತ್ತು. ಅವಳಲ್ಲಿನ ಭಯವನ್ನು ಹೆಚ್ಚಿಸಲು ಕಾವಲುಗಾರ ಹೇಳಿದ: 'ಪ್ರತಿದಿನವೊಂದಕ್ಕೆ ಆ ಸಾಲಿನಲ್ಲಿರುವ ಮೂವರಿಗೆ ಮಾತ್ರ ನ್ಯಾಯದೇವತೆ ದರ್ಶನ ನೀಡುತ್ತಾಳೆ. ನೀನು ಹೋಗಿ ಈಗ ಸಾಲಿನಲ್ಲಿ ನಿಂತರೆ ನ್ಯಾಯದೇವತೆಯನ್ನು ಭೇಟಿಯಾಗಲು ಕನಿಷ್ಠ ಮೂರು ಜನ್ಮಗಳಾದರೂ ನಿನಗೆ ಬೇಕಾದೀತು...' ನಕ್ಕು ನಕ್ಕು ಕಾವಲುಗಾರ ನೀರಾದರೆ, ಬೆವತು ಬೆವತು ಅವಳ ಶರೀರವಿಡೀ ನೀರಾಯಿತು.

ಅವಳಿಗೀಗ ದಿಕ್ಕೇ ತೋಚದಂತಾಯಿತು. ಕಾವಲುಗಾರನ ಮುಂದೆ ವಿಧೇಯಳಾಗಿ ನಿಂತು, 'ಅಣ್ಣಾ ನಾನು ನ್ಯಾಯದೇವತೆಯನ್ನು ಭೇಟಿಯಾಗದೆ ಹಿಂತಿರುಗಿ ಹೋಗಲಾರೆ. ಅದಕ್ಕೆ ಏನು ಮಾಡಲೂ ಸಿದ್ಧ. ದಯವಿಟ್ಟು ದಾರಿ ತೋರು, ನೀನೇ ನನಗೆ ಗತಿ... ಎಂದು ಗೋಗರೆದಳು. ಅವನಿಗೆ ಏನೋ ಹೊಳೆದಂತಾಯಿತು. ಅವಳ ಶರೀರವನ್ನು ಶೋಧಿಸುವವನಂತೆ ನೋಡಿದ. 'ಯಾವ ಜಾತಿ, ಯಾವ ಧರ್ಮದವಳು ನೀನು' — ಎಂಥದ್ದೋ ಆಸೆ ಅವನ ಕಣ್ಣುಗಳಲ್ಲಿ.

'ಎಂಥ ಪ್ರಶ್ನೆ ಅಣ್ಣಾ ನಿಂದು. ನನ್ನದು ಹೆಣ್ಣಿನ ಜಾತಿ, ಹೆಣ್ಣಿನ ಧರ್ಮ' ಅವಳು ಸೋತುಹೇಳಿದ್ದಳು. 'ನೀನು ಸಂಜೆಗತ್ತಲಾದ ನಂತರ ಅಗೋ ಆ ಕಾಡಿನಂಚಿಗೆ ಬಾ. ನಾಳೆ ಬೆಳಿಗ್ಗೆ ನ್ಯಾಯದೇವತೆಯನ್ನು ಭೇಟಿಯಾಗಲು ಗುರುತಿನ ಚೀಟಿಯನ್ನು ಕೊಡಿಸುತ್ತೇನೆ', ಕಾವಲುಗಾರ ಬಲೆ ಹೆಣೆದಿದ್ದ. ಒಪ್ಪಿಕೊಂಡಿದ್ದಳು ಅವಳು ಬಲೆಗೆ ಬೀಳಲು. ಅವಳಿಗೆ ಇರಲಿಲ್ಲ ಬೇರೆ ಯಾವುದೇ ದಾರಿ. ಸಂಜೆಯಾಗುತ್ತಿದ್ದಂತೆ ನ್ಯಾಯದೇಗುಲ ಮೌನವಾಯಿತು. ಜನರ ಗೌಜು ಗದ್ದಲ ಮಾಯವಾಯಿತು. ಕಾವಲುಗಾರ ಬಾಗಿಲಿಗೆ ಬೀಗ ಜಡಿದು ಕಾಡಿನ ಕತ್ತಲ ಕಡೆ ನಡೆದ. ಅವಳು ಮೂಕಳಾಗಿ ಅವನನ್ನು ಹಿಂಬಾಲಿಸಿದಳು. ಕತ್ತಲೆ ಕಾಡಿನಲ್ಲಿ ಅವನು ಹುಲಿಯಾದ, ಚಿರತೆಯಾದ. ಅವಳು ಜಿಂಕೆಯಾದಳು, ಮೊಲವಾದಳು. ಕಾವಲುಗಾರ ದಯಾಳು. ಅವಳನ್ನು ತನ್ನ ಮನೆಗೆ ಕರೆದೊಯ್ದು ಹೆಂಡತಿಗೆ ಹೇಳಿದ: 'ಪಾಪ, ಬಲು ದೂರದಿಂದ ಬಂದಿದ್ದಾಳೆ. ನಾಳೆ ನ್ಯಾಯದೇವತೆಯನ್ನು ಕಾಣಬೇಕಂತೆ. ಇವಳಿಗೆ ಇಲ್ಲಿ ಯಾರೂ ಇಲ್ಲ. ರಾತ್ರಿ ಇಲ್ಲಿ ಕಳೆಯಲೆಂದು ಕರೆ ತಂದೆ...' ಕಾವಲುಗಾರನ ಹೆಂಡತಿ ಕರುಣಾಮಯಿ. ಅವಳೂ ಹೆಣ್ಣು. ಸ್ನಾನಕ್ಕೆ ಬಿಸಿನೀರು ಕಾಯಿಸಿಕೊಟ್ಟಳು, ಬಿಸಿಬಿಸಿ ಊಟ ಮಾಡಿಟ್ಟಳು, ಧೈರ್ಯ ಹೇಳಿದ್ದಳು.

'ಏನು ನಿನ್ನ ಹೆಸರು?' ಕಾವಲುಗಾರನ ಹೆಂಡತಿ ಕೇಳಿದ್ದಳು. 'ಧರಿತ್ರಿ...' ಉತ್ತರಿಸಿದ್ದಳವಳು. 'ಅರೆರೆ, ನಾನು ಹೆಸರನ್ನು ಕೂಡ ಕೇಳಿರಲಿಲ್ಲ... ಧರಿತ್ರಿ ಸುಂದರವಾದ ಹೆಸರು' ಕಾವಲುಗಾರ ಮಾತು ಸೇರಿಸಿದ್ದ. ಅವಳು ರಾತ್ರಿ ಕಣ್ತುಂಬ ನಿದ್ದೆ ಮಾಡಿದಳು. ಕಾವಲುಗಾರನ ಹೆಂಡತಿ ಅವಳಿಗೆ ಹೇಳಿದಳು: 'ನನ್ನ ಗಂಡ ಕರುಣಾಮೂರ್ತಿ. ತನ್ನ ಸೇವಾವಧಿಯಲ್ಲಿ ಇದುವರೆಗೆ ಒಂದೈವತ್ತು ಹೆಣ್ಣುಮಕ್ಕಳಿಗಾದರೂ ಹೀಗೆ ಆಶ್ರಯ ಕೊಟ್ಟು ನ್ಯಾಯದೇವತೆಯನ್ನು ಭೇಟಿ ಮಾಡಿಸಿ ಕಳಿಸಿದ್ದಾನೆ'.

ಬೆಳಿಗ್ಗೆ ಕಾವಲುಗಾರ ರೆಡಿಯಾಗುವಷ್ಟರಲ್ಲಿ ಅವಳೂ ರೆಡಿಯಾಗಿದ್ದಳು. ಹತ್ತಿರದ ನ್ಯಾಯಸ್ಥಾನಕ್ಕೆ ನಡೆದೇ ಹೋದರು. ಅವನು ಮುಂದೆ, ಅವಳು ಹಿಂದೆ. ಕಾವಲುಗಾರ ತನ್ನ ಕರ್ತವ್ಯದ ಸ್ಥಾನ ಅಲಂಕರಿಸಿದ. ಮಾಮೂಲಿ ಗಜಿಬಿಜಿ ಪ್ರಾರಂಭವಾಯಿತು. ಸುಮಾರು ಜನ ಒಳಹೋದ ನಂತರ ಕಾವಲುಗಾರ ಅವಳನ್ನೂ ಒಳ ಬಿಟ್ಟ. ಕಾವಲುಗಾರ ನುಡಿದಂತೆ ನಡೆದುಕೊಂಡಿದ್ದ, ಪ್ರಾಮಾಣಿಕ. ನೂರು ಹೆಜ್ಜೆ ಹೋಗುವಷ್ಟರಲ್ಲಿ ನ್ಯಾಯಸ್ಥಾನ ಸಿಕ್ಕಿಯೇ ಬಿಟ್ಟಿತು. ನ್ಯಾಯಸ್ಥಾನ ವಿಶಾಲವಾಗಿಯೇ ಇತ್ತು. ನ್ಯಾಯದೇವತೆಯ ಆಸನ ಎತ್ತರದಲ್ಲಿತ್ತು. ಕೆಳಗೆ ಪಕ್ಕದಲ್ಲೇ ಕಟಕಟೆ. ನ್ಯಾಯದೇವತೆಯನ್ನು ನೋಡುವ ಅವಕಾಶ ಸಿಕ್ಕಿದ್ದಕ್ಕಾಗಿ ಅವಳು ಪುಳಕಗೊಂಡಿದ್ದಳು. ಅಷ್ಟೊತ್ತಿಗಾಗಲೇ ಫಿರ್ಯಾದುದಾರರು, ನ್ಯಾಯವಾದಿಗಳು, ಅಪರಾಧದ ಕಳಂಕ ಹೊತ್ತವರು ಅಲ್ಲಿ ತುಂಬಿ ಹೋಗಿದ್ದರು. ಬಾಗಿಲಿನ ಮೂಲೆಯಲ್ಲಿ ಒಂದಿಷ್ಟು ಜಾಗ ಮಾಡಿಕೊಂಡು ಯಾರಿಗೂ ಕಾಣದಂತೆ ನಿಂತಳವಳು.

ಜಯಘೋಷಗಳು ಮೊಳಗಲಾರಂಭಿಸಿದವು. ಓಹ್! ನ್ಯಾಯದೇವತೆ ಆಗಮಿಸುತ್ತಿದ್ದಾರೆ. ಪ್ರತಿಯೊಬ್ಬರೂ ಎದ್ದುನಿಂತರು. ಅವಳು ನಿಂತೇ ಇದ್ದುದ್ದರಿಂದ ಎದ್ದು ನಿಲ್ಲುವ ಪ್ರಮೇಯವೇ ಇರಲಿಲ್ಲ. ನ್ಯಾಯದೇವತೆ ಬಂದು ತಮ್ಮ ಪೀಠ ಅಲಂಕರಿಸಿದ್ದರು. ಅರೆ! ನ್ಯಾಯದೇವತೆ ಹೆಣ್ಣಾಗಿರದೆ ಗಂಡಾಗಿದೆ. ನ್ಯಾಯಮೂರ್ತಿ, ನ್ಯಾಯಾಧೀಶ, ನ್ಯಾಯಪೀಠ ಎಲ್ಲವನ್ನೂ ನ್ಯಾಯದೇವತೆ ಎಂತಲೇ ಕರೆಯುವುದೆಂದು ಈಗ ಅವಳಿಗೆ ಅರ್ಥವಾಗಿತ್ತು. ಅಚ್ಚರಿಯ ಜೊತೆಗೆ ಬೇಸರವೂ ಆಗಿತ್ತು. ಅಮೀನ ಗಟ್ಟಿ ಧ್ವನಿಯಲ್ಲಿ 'ಈಗ ಕೋರ್ಟ್ ಹಾಲ್‌ನಲ್ಲಿ ಕೋರ್ಟ್ ಕಲಾಪಗಳು ಶುರುವಾಗುತ್ತವೆ. ಎಲ್ಲರೂ ನಿಶ್ಶಬ್ದವಾಗಿರಬೇಕು. ಗಲಾಟೆ ಮಾಡುವವರನ್ನು ಕೋರ್ಟ್ ಹಾಲಿನಿಂದ ಹೊರದಬ್ಬಲಾಗುತ್ತದೆ. ಇದು ನ್ಯಾಯಸ್ಥಾನದ ಘನ ಆದೇಶವಾಗಿರುತ್ತದೆ' ಎಂದು ಕೂಗಿ ಹೇಳಿದ್ದ. ಕೋರ್ಟಿನ ಕಲಾಪ ನೋಡುವುದರಲ್ಲಿ ಅವಳು ತಲ್ಲೀನಳಾದಳು. ಅಮೀನ ಕೇಸ್ ನಂಬರುಗಳನ್ನು ಕೂಗತೊಡಗಿದ.

